'ಎಂಥಾ ಕನೆಕ್ಷನ್?' ಅಂತ ನಾನು ಕೇಳಿದ್ರೆ, 'ನಿಮ್ಗೆ ತುಳು ಬರ್ತಾದಾ...' ಅಂತ ಮರುಪ್ರಶ್ನೆ ಹಾಕಿದ. ಈ ಹುಚ್ಚ ವೃದ್ಧ ನನ್ನ ಹೀಗೆ ಪ್ರಶ್ನೆಗಳ ಸುಳಿಗಳಲ್ಲಿ ಮುಳುಗಿಸುತ್ತಾನೆ ಅನ್ನಿಸಿ ಕೋಪ ಬಂದಿತು. ಹಾಗೆ ನೋಡಿದರೆ ನಾನು ಹುಟ್ಟಿದ್ದು ಮೈಸೂರು. ತಂದೆ ತಾಯಿ ವಲಸೆ ಬಂದದ್ದು ಇಲ್ಲಿಗೆ. ನಂತರ ಮದ್ವೆ ಆಗಿದ್ದು ಕಾರ್ಕಳ ಹುಡುಗಿಯನ್ನ. ಭಾರೀ ಸಾಧಿಸುವವನೆಂಬಂತೆ ಮಹಾನಗರಕ್ಕೆ ಹೋಗಿ ಕಡೆಗೆ ಕುಡಿದು ಹಾಳಾದದ್ದು ಬೆಂಗ್ಳೂರಲ್ಲಿ. ಈಗ ನನ್ನ ಎಕ್ಸ್ ಹೆಂಡತಿ ಮದುವೆಯಾಗಿ ಗಂಡನ ಜತೆ ಇರುವುದು ದುಬೈಯಲ್ಲಿ... ಇಷ್ಟೆಲ್ಲ ಕಾಂಪ್ಲಿಕೇಟೆಡ್ ಬ್ಯಾಕ್ ಸ್ಟೋರಿಯನ್ನು ನಾನು ಲೋಕಲ್ ಆಗಿದ್ದರೂ ತುಳು ಯಾಕ್ ಕಲಿತಿಲ್ಲ ಅನ್ನೋದನ್ನ ಈ ಅಧಿಕಪ್ರಸಂಗಿ ಮುದುಕನಿಗೆ ಯಾಕೆ ಒಪ್ಪಿಸಬೇಕು ಅಂತ ಚುಟುಕಾಗಿ, 'ಇಲ್ಲ... ನಾನ್ ಬೆಂಗ್ಳೂರವನು...' ಅಂದೆ. ಆದರೂ ಅವನ ಕಾಕದೃಷ್ಟಿ ಗುಮಾನಿಯಲ್ಲಿ ಮಿನುಗಿದರೂ ನಂತರ ಮಂದಹಾಸ ಬೀರಿ, 'ನಿಮ್ಮನ್ನ ನಾನ್ ನಂಬ್ತೇನೆ; ಈ ಜಾಗಕ್ಕೇ ಯಾರೂ ಬರೋದೇ ಇಲ್ಲ... ಆದ್ರೆ ನೀವ್ ಬಂದಿದ್ದೀರ... ನೀವು ಪಕ್ಕಾ... ಯಾಕಂದ್ರೆ ಆ ಜೀವಿಗಳಿದ್ದಾರಲ್ಲ ಅವ್ರಿಗೆ ಈ ಅಲ್ಕೋಹಾಲ್ ಹೇಳಿದ್ರೆ ಆಗುದಿಲ್ಲ...' ಅಂದ ನಿಗೂಢ ನಗೆ ಬೀರಿ.

ನನಗೆ ರೇಗಿತು. ಆದರೆ, ಝಳಪಿಸುವ ಬಿಸಿಲಿನ ಜೊತೆಗೂಡಿ ಬೀಸುತ್ತಿದ್ದ ಬಿಸಿಗಾಳಿಯಿಂದ ನನಗೆ ಮತ್ತು ಬರುವಂತಾಗುತ್ತಾ ಇತ್ತು. ಆಲಸ್ಯದ ಸ್ವರದಲ್ಲಿ 'ಯಾವ ಜೀವಿಗಳಿಗೆ... ಕರೆಕ್ಟಾಗ್ ಹೇಳ್ರೀ... ನಿಮ್ಮ ಸಾಹೇಬ ಮಾಯ ಆದ್ನಲ್ಲ ನಾಯ್ಡು, ಅವ್ನ ಬಗ್ಗೇನ ನೀವ್ ಹೇಳ್ತಾ ಇರೋದು' ಅಂದೆ. 'ಅಲ್ಲಾ ಇವ್ರೇ...! ನಾಯ್ಡು ಸರ್‌ನ ಮಾಯ ಮಾಡಿದ್ರಲ್ಲ ಆ ಜೀವಿಗಳಿಗೆ' ಅಂತ ಉಸುರಿದ.

ನನ್ನ ರೋಮಗಳು ನೆಟ್ಟಗಾದವು. 'ಏನ್ರೀ ಹಂಗಂದ್ರೆ...' ಅನ್ನುತ್ತಿದ್ದಂತೆ ಇದ್ದಕ್ಕಿದ್ದಂತೆ ಭೂಗರ್ಭದಾಳದಿಂದೆಲ್ಲೋ ಯಾರೋ ಕೊರೆಯುವ ಯಂತ್ರದಲ್ಲಿ ಶಿಲೆಯನ್ನು ಇರಿಯುವ ಕಂಪನಾಂತರಗಳು ನಮ್ಮನ್ನು ಆವರಿಸಿದವು. 'ಭೂಕಂಪ ಆಗ್ತಾ ಇದ್ಯಾ...' ಅನ್ನುತ್ತಾ ಹೆದರಿ ಎದ್ದು ನಿಂತು ಆ ಕಂಬವನ್ನು ಬಾಚಿ ತಬ್ಬಿದೆ. 'ನೋಡಿ... ನಿಮ್ಗೆ ಸಹಾ ಸ್ಪಷ್ಟವಾಗಿ ಕೇಳ್ತಾ ಇದೆ ಅಲ್ಲ... ಅದಕ್ಕೇ ನನಗೆ ಗೊತ್ತಿತ್ತು ನೀವು ಕೂಡ ನನ್ನ ಹಾಗೇ... ಬನ್ನಿ ತೋರಿಸ್ತೀನಿ...' ಅಂತ ಹೆಚ್ಚು ಕಮ್ಮಿ ನನ್ನ ಕೈ ಹಿಡಿದು ಮುದುಕ ಎಳೆದುಕೊಂಡು ಆ ಚಿಲಕ ಹಾಕಿದ್ದ ಕೋಣೆಯ ಬಾಗಿಲನ್ನು ತಳ್ಳಿ ಒಳ ನುಗ್ಗಿದ.

ಪುರಾತನ ಕಡತಗಳಿಂದ ತುಂಬಿ ಹೋಗಿದ್ದ ಆ ಕೋಣೆ ಮೇಲಿದ್ದ ಬೆಳಕಿಂಡಿಗಳಿಂದ ಸೋರುತ್ತಿದ್ದ ಬೆಳ್ಳಿಬೆಳಕಿನಿಂದ ಮಂಕಾಗಿ ಹೊಳೆಯುತ್ತಿತ್ತು. 'ಇಲ್ಲೇನಿದೆ...' ಈ ಜಾಗವನ್ನೇ ಈ ತಲೆಕೆಟ್ಟ ತಾತ ನಾನು ಬಂದಾಗ ಕದ್ದು ಇಣುಕಿ ಕಿಟಕಿಗಳ ಮುಖಾಂತರ ನೋಡುತ್ತಾ ಇದ್ದದ್ದು. ಆದರೆ, ಆತ ಅಲ್ಲಿ ನಿಲ್ಲದೆ ಆ ತುದಿಯಲ್ಲಿದ್ದ ಬಾಗಿಲನ್ನು ಅವಸರವಸರವಾಗಿ ತೆಗೆದು ಆಚೆ ನಡೆದ. ಅದೊಂದು ಚಿಕ್ಕ ಮೈದಾನದಂತಹ ಬಯಲು ಪ್ರದೇಶ. ಮೂಲೆಗಳಲ್ಲ ಲಂಟಾನ ಕಾಡುಗಳು ಹಬ್ಬುತ್ತಾ ಇದ್ದರೂ, ಮಧ್ಯ ಸಾಕಷ್ಟು ಮಿಕ್ಕಿದ್ದ ಜಾಗದಲ್ಲಿ ಅನೇಕ ಶಿಲಾಶಾಸನಗಳನ್ನು, ವೀರಗಲ್ಲುಗಳನ್ನು, ಸ್ಮಾರಕ ಶಿಲೆಗಳನ್ನು, ವಿಗ್ರಹಗಳನ್ನು, ನಿರ್ವಾಣ ಪಂಥದ ಮೂರ್ತಿಗಳನ್ನು, ಐತಿಹಾಸಿಕ, ಜಾನಪದ, ಪೌರಾಣಿಕ ನಾಯಕರ ಪ್ರತಿಮೆಗಳನ್ನು ಇರಿಸಿದ್ದರು. ಬಹುಶಃ ತಾತ ಹೇಳಿದ ಹಾಗೇ ಅಸುರಕ್ಷಿತ ಪ್ರಾಚೀನ ಶಿಲಾಕೃತಿಗಳ ಸಮೀಕ್ಷೆ ಮತ್ತು ಸಂರಕ್ಷಣೆಯ ಪ್ರಾಜೆಕ್ಟಿನ ಭಾಗವೇನೋ ಈ ಮೂರ್ತಿಗಳು ಎಂದು ಊಹಿಸಿದೆ. ಆಗ ಆತ ಆ ಲಂಟಾನ ಕಾಡಿನತ್ತ ಬೊಟ್ಟು ಮಾಡಿ, 'ಇನ್ನು ಒಂದು ವಾರದ ಒಳಗೆ ನಿಮ್ಮ ಪರ್ವತನೇನಿ ಪ್ರಾಜೆಕ್ಟ್ ಶುರು ಆಗುತ್ತೆ... ಇದೆಲ್ಲ ಈಗ ಅವರದ್ದೇ ಲ್ಯಾಂಡ್' ಎಂದ ಬಹಳ ನಿರ್ಲಿಪ್ತನಾಗಿ. 'ಚಿರತೆಗಳು ಓಡಾಡಕ್ಕೆ ಸಕತ್ತಾಗಿದೆ ಈ ಸ್ಪಾಟ್... ಆದ್ರೆ ಏನೋ ತೋರಿಸ್ತೀನಿ ಅಂದ್ರಲ್ಲ...' ಅಂದೆ. ಆಗ ಆತ ಕಣ್ಣಲ್ಲೇ ಕಳ್ಳ ನಗೆ ಬೀರುತ್ತಾ, ಸಾಲು ಸಾಲಾಗಿ ಇರಿಸಿದ್ದ ಪ್ರತಿಮೆಗಳಗುಂಟ ನಡೆಯುತ್ತಾ ಹೋಗಿ, ಒಂದು ಕಡೆ ನಿಂತು ನನ್ನನ್ನು ಹತ್ತಿರ ಕರೆದ. ಅಜ್ಞಾತ ಕುತೂಹಲವೊಂದು ನನ್ನ ಹೊಟ್ಟೆಯೊಳಗೆ ಕಲಮಲ ಎಬ್ಬಿಸಿದ್ದರಿಂದ, ಹಾಗೇ ಈ ವಿಚಿತ್ರ ಮುದುಕನ ರಹಸ್ಯ ಭಾಷೆಗೆ ನಾನು ಒಗ್ಗಿದ್ದರಿಂದ ಮರುಮಾತನಾಡದೆ ನಾನು ಅವನಿದ್ದ ಕಡೆಗೆ ಪಾದ ಬೆಳೆಸಿದೆ. ಹಾಗೇ ಹೆಜ್ಜೆ ಹಾಕುತ್ತಾ ನನ್ನ ಸುತ್ತಮುತ್ತ ಕಣ್ಣಾಡಿಸಿದೆ. ನನಗೆ ಕಂಡದ್ದೆಲ್ಲ ಶತ ಶತಮಾನಗಳಿಂದ ಶಿಥಿಲವಾಗಿ ಕಾಲದ ಜೊತೆ ಬೆರೆತು ಸ್ತಬ್ದವಾಗಿದ್ದ ಸಂಸ್ಕೃತಿಗಳ ಪಳೆಯುಳಿಕೆಗಳು. ಆದರೆ, ಈ ಹಯವದನ ಈಗ ನನಗೆ ಬೊಟ್ಟು ಮಾಡಿ ತೋರುತ್ತಿದ್ದ ಕಲ್ಲಿನಲ್ಲಿ ಕೆತ್ತಿದ ಚರಿತ್ರಪೂರ್ವದ ಪವಿತ್ರ